**ಎಸ್.ಸಿ.ಸಂಖ್ಯೆಃ 10047/2025**
**ಪ್ರಾ.ಸಾ.ಸಂಖ್ಯೆಃ 12**
**ಚಾ.ಸಾ.ಸಂಖ್ಯೆಃ 17**

**ಪೀಠಾಸೀನಾಧಿಕಾರಿಗಳು, 03 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ,**

**ಬಾಗಲಕೋಟೆ, ಉಪಸ್ಥಿತಿಃ ಮುಧೋಳ**

**ಎಸ್.ಸಿ.ಸಂಖ್ಯೆಃ 10047/2025**

| | |
|---|---|
| ಹೆಸರುಃ | ದೀಪಕ ಕಟ್ಟಿಮನಿ |
| ತಂದೆಯ ಹೆಸರುಃ | ರಾಮಚಂದ್ರ |
| ವಯಸ್ಸುಃ | 54 ವರುಷ |
| ಉದ್ಯೋಗಃ | ಎ.ಎಸ್.ಐ. ರಾಜ್ಯಗುಪ್ತವಾರ್ತೆ, ಬಾಗಲಕೋಟೆ. |
| ವಾಸಃ | ಬಾಗಲಕೋಟೆ. |

**ಸಾಕ್ಷಿಯನ್ನು ದಿಃ 04.02.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ-**

ನಾನು 2020 ರಿಂದ 2022 ರವರೆಗೆ ಎ ಎಸ್ ಐ ಅಂತಾ ಮುಧೋಳ ಪೋಲೀಸ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿಃ 27.02.2021 ರಂದು ಆಸ್ಪತ್ರೆಯಿಂದ ಒಂದು ಎಮ್.ಎಲ್.ಸಿ. ಮಾಹಿತಿ ಬಂದಿದೆ ಅಂತಾ ಠಾಣೆಯಿಂದ ನನಗೆ ಫೋನು ಮಾಡಿ ತಿಳಿಸಿದರು. ನಾನು ಮಧ್ಯಾಹ್ನ 03.30 ಗಂಟೆಗೆ ಮುಧೋಳದ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಅಲ್ಲಿ ದಾಖಲಾಗಿದ್ದ ಶೇಖರ ಮಾಂಗ ಚಾಸಾ-1 ಹಾಗೂ ಚಾಸಾ-4 ಶ್ರೀದೇವಿ ಮಾಂಗ ಇವರನ್ನು ವಿಚಾರಿಸಿದೆ. ದೂರು ಕೊಡುವಂತೆ ಹೇಳಿದೆ. ಅವರು ತಮ್ಮ ಹಿರಿಯರನ್ನು ವಿಚಾರಿಸಿ

ದೂರು ನೀಡುವುದಾಗಿ ಹೇಳಿದರು. ಆ ದಿವಸ ರಾತ್ರಿ 09.30 ಗಂಟೆಗೆ ಶೇಖರ ಮಾಂಗ ಬಂದು ನಿಪಿ-11 ರಂತೆ ದೂರು ನೀಡಿದರು.

3. ಸದರಿ ದೂರಿನ ಆಧಾರದ ಮೇಲೆ ನಾನು ನಮ್ಮ ಠಾಣೆಯ ಗುನ್ನಾ 36/2021 ರಲ್ಲಿ ಪ್ರಕರಣ ದಾಖಲಿಸಿಕೊಂಡು ಈಗ ನೋಡುತ್ತಿರುವ ನಿಪಿ-15 ರಂತೆ ಪ್ರಥಮ ವರ್ತಮಾನ ವರದಿ ತಯಾರಿಸಿದೆ. ನಂತರ ದೂರು ಹಾಗೂ ಪ್ರಥಮ ವರ್ತಮಾನ ವರದಿಗಳನ್ನು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟೆ.

4. ದಿನಾಂಕಃ 28.02.2021 ರಂದು ಮತ್ತೆ ಚಾಸಾ-1 ಬೆಳಗಿನ 09.00 ಗಂಟೆಗೆ ಪೋಲೀಸ ಠಾಣೆಗೆ ಬಂದರು. ಮತ್ತೆ ಒಂದು ಲಿಖಿತ ಪುರವಣಿ ಹೇಳಿಕೆ ನೀಡಿದರು. ಅದರಲ್ಲಿ ಆರೋಪಿ 1 ತನ್ನ ತಾಯಿಯ ಕುತ್ತಿಗೆ ಹಿಚುಕಿದರು, ಸೀರೆ ಹಿಡಿದು ಎಳೆದಾಡಿದರು ಅಂತಾ ಕಾಣಿಸಲಾಗಿತ್ತು. ಆಗ ನಾನು ನ್ಯಾಯಾಲಯಕ್ಕೆ ಸದರಿ ಪ್ರಕರಣದಲ್ಲಿ ಭಾ.ದಂ.ಸಂ. ಕಲಂ 354 (ಬಿ) ಹಾಗೂ 307 ಇವುಗಳನ್ನು ಅಳವಡಿಸಿಕೊಳ್ಳಲು ಮನವಿ ಸಲ್ಲಿಸಿದೆ.

5. ನಂತರ ಬೆಳಗಿನ 10.00 ಗಂಟೆಗೆ ಪಂಚರಾದ ಚಾಸಾ-2 ಹಾಗೂ 3 ಇವರನ್ನು ಕರೆದುಕೊಂಡು ಘಟನಾ ಸ್ಥಳಕ್ಕೆ ಭೇಟಿ ನೀಡಿ ಚಾಸಾ-4 ಇವರು ತೋರಿಸಿದಂತೆ ನಿಪಿ-4 ರಂತೆ ಘಟನಾ ಸ್ಥಳದ ಪಂಚನಾಮೆ ಮಾಡಿದೆ. ಸ್ಥಳದಿಂದ ಈಗ ನೋಡುತ್ತಿರುವ ಮು.ಮಾ. 1 ನ್ನು ಜಪ್ತು ಮಾಡಿದೆ. ಸ್ಥಳದಲ್ಲಿ ನಿಪಿ-16 ರಂತೆ ಸ್ಥಳ

ನಕಾಶೆ ತಯಾರಿಸಿ, ಸ್ಥಳ ಪಂಚನಾಮೆ ಮಾಡಿದೆ. ಸ್ಥಳದಲ್ಲಿ ಚಾಸಾ-14 ಇವರಿಂದ ಈಗ ನೋಡುತ್ತಿರುವ ನಿಪಿ-5 ಹಾಗೂ 6 ರಂತೆ ಫೋಟೋಗಳನ್ನು ತೆಗೆಸಿದ್ದೆನೆ. ನಂತರ ಚಾಸಾ-4 ರಿಂದ 9 ಹಾಗೂ 11 ಇವರ ಹೇಳಿಕೆಗಳನ್ನು ನೀಡಿದ್ದೇನೆ. ಚಾಸಾ-7 ನಿಪಿ-7 ರಂತೆ ನನ್ನ ಮುಂದೆ ಹೇಳಿಕೆ ನೀಡಿದ್ದಾರೆ. ಮುಂದಿನ ತನಿಖೆಯನ್ನು ಚಾಸಾ-18 ವಹಿಸಿಕೊಂಡಿದ್ದಾರೆ.

**<u>ಪಾಟೀ ಸವಾಲುಃ 2 ರಿಂದ 4 ನೇ ಆರೋಪಿತರ ಪರವಾಗಿ ಶ್ರೀ. ಎಸ್.ಸಿ.ಎಚ್. ವಕೀಲರಿಂದಃ</u>**

1. ಆಸ್ಪತ್ರೆಯಲ್ಲಿ ಚಾಸಾ-1 ಹಾಗೂ 4 ಇವರನ್ನು ಭೇಟಿ ಮಾಡಿ ವಿಷಯ ತಿಳಿದ ನಂತರ ಚಾಸಾ-1 ದೂರು ಸಲ್ಲಿಸುವವರೆಗೆ ನಾನು ಪ್ರಕರಣ ದಾಖಲಿಸಿಲ್ಲ. ಅದೇ ದಿವಸ ಕುಬಸದ ಆಸ್ಪತ್ರೆಯಿಂದ ಕೂಡ ಒಂದು ಎಮ್.ಎಲ್.ಸಿ. ದಾಖಲೆ ಬಂದಿತ್ತು ಎಂದರೆ ಸರಿ. ನಾನು ಈ ಬಗ್ಗೆ ನಿಡಿ-5 ರಂತೆ ಪ್ರಕರಣ ದಾಖಲಿಸಿಕೊಂಡಿದ್ದೇನೆ ಎಂದರೆ ಸರಿ. ಈಗ ನೋಡುತ್ತಿರುವ ನಿಡಿ-5 ಕ್ಕೆ ಲಗತ್ತಿಸಿದ ದೂರು ನಾನು ಕುಬಸದ ಆಸ್ಪತ್ರೆಯಲ್ಲಿ ಪಡೆದ ದೂರು ಇರುತ್ತದೆ ಎಂದರೆ ಸರಿ. (ಅದನ್ನು ನಿಡಿ-5(ಎ) ಅಂತಾ ಗುರುತಿಸಲಾಯಿತು.)

2. ದಿನಾಂಕಃ 27 ರಂದು ಚಾಸಾ-1 ನೀಡಿದ ದೂರಿನಲ್ಲಿ ಆರೋಪಿತರು ತನ್ನ ತಾಯಿಯ ಕುತ್ತಿಗೆ ಹಿಚುಕಿದ ಬಗ್ಗೆ ಹಾಗೂ ಸೀರೆ ಹಿಡಿದು ಎಳೆದ ಬಗ್ಗೆ ನಮೂದಿಸಿಲ್ಲ ಎಂದರೆ ಸರಿ. ಆರೋಪಿ 2 ದೂರು ನೀಡಿದ ಮೇಲೆ ದೂರುದಾರರು ನಿಪಿ-12 ರಂತೆ

ಹೆಚ್ಚುವರಿ ದೂರು ನೀಡಿದ್ದಾರೆ ಎಂದರೆ ಸರಿ. ಈ ಪ್ರಕರಣವನ್ನು ನಾನು ರಾಜಕೀಯ ಒತ್ತಡದ ಕಾರಣದಿಂದಾಗಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ.

3. ಮಾರನೇ ದಿವಸ ನಾನು ಗುನ್ಹಾ ಜಾಗೆಗೆ ಹೋದೆ ಅಂತಾ, ಚಾಸಾ–2 ಹಾಗೂ 3 ಇವರ ಸಮಕ್ಷಮದಲ್ಲಿ ಚಾಸಾ–4 ತೋರಿಸಿದಂತೆ ಗುನ್ಹಾ ಜಾಗೆಯ ಪಂಚನಾಮೆ ಮಾಡಿದೆ ಅಂತಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಿಪಿ–4 ರಿಂದ 6 ಹಾಗೂ 16 ಇವುಗಳನ್ನು ಈ ಪ್ರಕರಣಕ್ಕೆ ಅನುಕೂಲವಾಗುವ ರೀತಿಯಲ್ಲಿ ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಚಾಸಾ–4 ರಿಂದ 9 ಹಾಗೂ 11 ಇವರ ಹೇಳಿಕೆಗಳನ್ನು ಪಡೆದಿದ್ದೇನೆ ಅಂತಾ, ಚಾಸಾ–7 ನಿಪಿ–7 ರಂತೆ ಹೇಳಿಕೆ ನೀಡಿದ್ದಾರೆ ಅಂತಾ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ.

4. ಚಾಸಾ–5 ನನ್ನ ಮುಂದೆ ನೀಡಿದ ಹೇಳಿಕೆಯಲ್ಲಿ ಆರೋಪಿ 1 ಚಾಸಾ–1 ಈತನ ಕುತ್ತಿಗೆ ಹಿಚುಕಿದ ಬಗ್ಗೆ, ಆರೋಪಿ 2 ಅವನಿಗೆ ಬಡಿಗೆಯಿಂದ ಹೊಡೆದ ಬಗ್ಗೆ ಹೇಳಿಕೆ ನೀಡಿಲ್ಲ. ನಾನು ದೂರುದಾರರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ದೂರನ್ನು ದಾಖಲಿಸಿಕೊಂಡು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ** 1 ನೇ ಆರೋಪಿ ಪರವಾಗಿ ಶ್ರೀ. ಎಸ್.ಐ.ಎಚ್. ವಕೀಲರು ಅದೇ ಪಾಟೀ ಸವಾಲನ್ನು ಅನ್ವಯಿಸಿಕೊಳ್ಳುತ್ತಾರೆ ಅಂತಾ ತಿಳಿಸಿರುತ್ತಾರೆ.

**ಎಸ್.ಸಿ.ಸಂಖ್ಯೆಃ 10047/2025**
**ಪ್ರಾ.ಸಾ.ಸಂಖ್ಯೆಃ 12**
**ಚಾ.ಸಾ.ಸಂಖ್ಯೆಃ 17**

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ. ಸರಿ ಅದೆ.**

**Sd/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮುಧೋಳ.**